# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **379** |
| ಸದಸ್ಯರ ಹೆಸರು | : | ಡಾ: ಎಂ.ಜಿ. ಮುಳೆ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19-08-2026 |
| ಉತ್ತರಿಸುವ ಸಚಿವರು | : | ಇಂಧನ ಮತ್ತು ಪ್ರವಾಸೋದ್ಯಮ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಮಂಜ್ರಾ ನದಿ ಪಾತ್ರದ ಕೊಳಚೆ/ಪ್ರವಾಹ ಪೀಡಿತ ಗ್ರಾಮಗಳಾದ ಕೊಡಗಾಂವ, ಬಲ್ಲೂರ್ (ಬಿ), ಕೌಠಾ(ಕೆ) ಕೌಠಾ (ಬಿ), ಪಶಾಪೂರ ಮತ್ತು ಗಡಿ ಕುಶನೂರ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಲೋಡ್ ಶೆಡ್ಡಿಂಗ್, ವೋಲ್ಟೇಜ್ ಕುಸಿತ ಮತ್ತು ಪದೇ ಪದೇ ಟ್ರಿಪ್ಪಿಂಗ್‌ನಿಂದಾಗಿ ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಮಂಜ್ರಾ ನದಿ ಪಾತ್ರದ ಕೊಳಚೆ/ಪ್ರವಾಹ ಪೀಡಿತ ಗ್ರಾಮಗಳಾದ ಕೊಡಗಾಂವ, ಬಲ್ಲೂರ್ (ಬಿ), ಕೌಠಾ(ಕೆ) ಕೌಠಾ (ಬಿ), ಪಶಾಪೂರ ಮತ್ತು ಗಡಿ ಕುಶನೂರ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಅಕ್ಟೋಬರ್-25 ರಿಂದ ಡಿಸೆಂಬರ್-25ರ ಅವಧಿಯೊಳಗೆ ಸತತ ಮಳೆಯಿಂದಾಗಿ ಪ್ರವಾಹ ಉಂಟಾದ ಪರಿಣಾಮ ವಿದ್ಯುತ್ ವ್ಯತ್ಯಯ ಉಂಟಾಗಿರುತ್ತದೆ.<br><br>ಸದರಿ ಗ್ರಾಮಗಳಿಗೆ 110 ಕೆ.ವಿ. ವಿದ್ಯುತ್ ಉಪ ಕೇಂದ್ರಗಳಾದ ಸಂತಪೂರ್ ಮತ್ತು ಜನವಾಡದಿಂದ ವಿದ್ಯುತ್ ಪೂರೈಸಲಾಗುತ್ತಿದೆ. 110 ಕೆ.ವಿ. ಸಂತಪೂರ್ ಮತ್ತು 110 ಕೆ.ವಿ. ಜನವಾಡ ವಿದ್ಯುತ್ ಉಪ-ಕೇಂದ್ರಗಳಿಂದ ಯಾವುದೇ ರೀತಿಯ ಲೋಡ್ ಶೆಡ್ಡಿಂಗ್ ಮಾಡಿರುವುದಿಲ್ಲ.<br><br>ಸದರಿ ಗ್ರಾಮಗಳಾದ ಕೊಡಗಾಂವ, ಬಲ್ಲೂರ್ (ಬಿ), ಕೌಠಾ(ಕೆ) ಕೌಠಾ (ಬಿ), ಪಶಾಪೂರ ಮತ್ತು ಗಡಿ ಕುಶನೂರ ಗ್ರಾಮಗಳಿಗೆ ಪ್ರಸ್ತುತ ಗುಣಮಟ್ಟದ ವಿದ್ಯುತ್ ಸಮರ್ಪಕವಾಗಿ ನೀಡಲಾಗುತ್ತಿದೆ.<br><br>ಮುಂದುವರೆದು, ಬಲ್ಲೂರ(ಬಿ), ಕೌಠಾ(ಕೆ), ಕೌಠಾ(ಬಿ), ಪಶಾಪೂರ ಮತ್ತು ಗಡಿ ಕುಶನೂರ ಸೇರಿದಂತೆ ವಿವಿಧ ಗ್ರಾಮಗಳಲ್ಲಿನ ಗ್ರಾಹಕರಿಗೆ ಮುಂಬರುವ ಬೇಡಿಕೆಯನ್ನು ಪರಿಗಣಿಸಿ ಕೃಷಿ ಪಂಪಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸಲು ಬಲ್ಲೂರು (ಜೆ) ಗ್ರಾಮದಲ್ಲಿ ಹೊಸದಾಗಿ 33/11 ಕೆ.ವಿ ಉಪ-ಕೇಂದ್ರವನ್ನು ನಿರ್ಮಿಸಲು ಉದ್ದೇಶಿಸಿದ್ದು, ಪ್ರಸ್ತುತ ಟೆಂಡರ್ ಪ್ರಕ್ರಿಯೆಯಲ್ಲಿದೆ. |
| ಆ) | ಹಿಂಗಾರು ಋತುವಿನ ಪ್ರಮುಖ ಬೆಳೆಗಳಾದ ಕಬ್ಬು ಮತ್ತು ಕಡಲೆ ಬೆಳೆಗಳಿಗೆ ನೀರು ಹರಿಸಲು ನಿಗದಿತ ನಿಯಮಾವಳಿಯಂತೆ ಹಗಲು ವೇಳೆಯಲ್ಲಿ (ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ) ಪೂರ್ಣ ಪ್ರಮಾಣದ 7 ಗಂಟೆಗಳ ತ್ರಿಫೇಸ್ (3-phase) ವಿದ್ಯುತ್ ಸರಬರಾಜು ಮಾಡಲು ಅನುಸರಿಸುತ್ತಿರುವ ಕಾರ್ಯವಿಧಾನಗಳೇನು;<br>ನಿಯಮ ಪಾಲನೆಯಾಗದಿರಲು ಕಾರಣಗಳೇನು; | ಬೀದರ್ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗೆ ಐ.ಪಿ ಫೀಡರ್‌ಗಳ ಮೂಲಕ ಬೆಳಿಗ್ಗೆ 9:00 ಗಂಟೆಯಿಂದ ಸಾಯಂಕಾಲ 4:00 ಗಂಟೆಯವರೆಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.<br><br>ಕೆಲವೊಮ್ಮೆ ವಿದ್ಯುತ್ ಸುಧಾರಣಾ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಮಾರ್ಗ ಮುಕ್ತತೆ ಪಡೆದುಕೊಂಡಾಗ, ವಿದ್ಯುತ್ ಸರಬರಾಜಿನಲ್ಲಿ ಆಗಿರುವ ವ್ಯತ್ಯಯವನ್ನು, ಅಂದಿನ ದಿನವೇ ಹೆಚ್ಚುವರಿಯಾಗಿ ವಿದ್ಯುತ್ ಸರಬರಾಜು ಮಾಡಿ ಸರಿದೂಗಿಸಲಾಗುತ್ತಿದೆ. |

<table>
<tr>
<td>ಇ)</td>
<td>ಪ್ರವಾಹದಿಂದಾಗಿ ನದಿ ಪಾತ್ರದಲ್ಲಿ ವಾಲಿರುವ/ಬಿದ್ದಿರುವ ವಿದ್ಯುತ್ ಕಂಬಗಳು, ಹಾನಿಗೊಳಗಾದ ಲೈನ್‌ಗಳು ಮತ್ತು ಸುಟ್ಟುಹೋದ ಪರಿವರ್ತಕಗಳನ್ನು (Transformers) 24 ರಿಂದ 48 ಗಂಟೆಗಳೊಳಗೆ ಬದಲಾಯಿಸುವಲ್ಲಿ<br>ಲೈನ್‌ಮೆನ್‌ಗಳು ಹಾಗೂ ಸ್ಥಳೀಯ ಜೆಸ್ಕಾಂ(GESCOM) ಸಿಬ್ಬಂದಿಯ ಬೇಜವಾಬ್ದಾರಿತನ ಮತ್ತು ವಿಳಂಬ ಧೋರಣೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಶಿಸ್ತು ಕ್ರಮಗಳೇನು;</td>
<td>ಬೀದರ್ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಮಂಜ್ರಾ ನದಿಯ ದಡದಲ್ಲಿರುವ ಪ್ರದೇಶಗಳಲ್ಲಿ ಅಕ್ಟೋಬರ್-25 ರಿಂದ ಡಿಸೆಂಬರ್ -25ರ ಅವಧಿಯೊಳಗೆ ಅತಿಯಾದ ಮಳೆಯಿಂದಾಗಿ ಪ್ರವಾಹ ಉಂಟಾದ ಪರಿಣಾಮ ಹಲವು ಗ್ರಾಮಗಳಲ್ಲಿ ವಾಲಿರುವ / ಬಿದ್ದಿರುವ ವಿದ್ಯುತ್ ಕಂಬಗಳು, ಹಾನಿಗೊಳಗಾದ ಮಾರ್ಗಗಳು ಮತ್ತು ವಿಫಲಗೊಂಡ ಪರಿವರ್ತಕಗಳು ಇರುವ ಪ್ರದೇಶವು ನೀರಿನಿಂದ ಆವರಿಸಿಕೊಂಡಿದ್ದು, ದುರಸ್ತಿ ಕಾರ್ಯವನ್ನು ತಕ್ಷಣವೇ ಕೈಗೆತ್ತಿ ಕೊಳ್ಳಲು ಆಗಿರುವುದಿಲ್ಲ.<br>ನದಿ ಪಾತ್ರದಲ್ಲಿನ ಪ್ರದೇಶಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾದ ನಂತರ ಹಾನಿಗೊಳಗಾದ ಎಲ್ಲಾ ವಿದ್ಯುತ್ ಕಂಬಗಳು, ಮಾರ್ಗಗಳನ್ನು ಸರಿಪಡಿಸಿ, ವಿಫಲವಾದ ಪರಿವರ್ತಕಗಳನ್ನು ಬದಲಾಯಿಸಲಾಗಿರುತ್ತದೆ.</td>
</tr>
<tr>
<td>ಈ)</td>
<td>ಕೃಷಿ ನೀರಾವರಿಗೆ ನಿರಂತರ ವಿದ್ಯುತ್ ಒದಗಿಸಲು ಈ ಭಾಗದ ನದಿ ಪಾತ್ರದ ಕೃಷಿ ಫೀಡರ್‌ಗಳನ್ನು ಸೌರಶಕ್ತಿ ಚಾಲಿತ ಕೃಷಿ ಫೀಡರ್ (PM-KUSUM-C ಯೋಜನೆ) ಅಡಿಯಲ್ಲಿ ಮೇಲ್ದರ್ಜೆಗೇರಿಸಲು ಅಥವಾ ಹೊಸ ಉಪಕೇಂದ್ರಗಳನ್ನು (Sub-stations) ಸ್ಥಾಪಿಸಲು ಸರ್ಕಾರ ಕ್ರಮ ವಹಿಸಿದೆಯೇ;</td>
<td>ಔರಾದ ತಾಲ್ಲೂಕಿನ ಮಾಂಜ್ರಾ ನದಿ ಪಾತ್ರದ ಗ್ರಾಮಗಳಿಗೆ ವಿದ್ಯುತ್ ಒದಗಿಸಲು ಕೃಷಿ ಫೀಡರ್ ಗಳನ್ನು ಸೌರೀಕರಣ ಗೊಳಿಸುವ ಯೋಜನೆ PM-KUSUM C ರ ಅಡಿಯಲ್ಲಿ ಕೈಗೆತ್ತಿಕೊಂಡಿರುವುದಿಲ್ಲ.<br>ಆದರೆ, ಮುಂಬರುವ ವಿದ್ಯುತ್ ಬೇಡಿಕೆಯನ್ನು ಪರಿಗಣಿಸಿ ಕೃಷಿ ಪಂಪ್‌ಸೆಟ್‌ಗಳಿಗೆ ಉತ್ತಮ ಗುಣಮಟ್ಟದ ವಿದ್ಯುತ್ ಒದಗಿಸಲು ಬಲ್ಲೂರ್ (ಜೆ) ಗ್ರಾಮದಲ್ಲಿ ಹೊಸದಾಗಿ 33/11 ಕೆ.ವಿ ಉಪ-ಕೇಂದ್ರವನ್ನು ನಿರ್ಮಿಸಲು ಟೆಂಡರ್ ಪ್ರಕ್ರಿಯೆ ಚಾಲನೆಯಲ್ಲಿದೆ.</td>
</tr>
<tr>
<td>ಉ)</td>
<td>ವಿದ್ಯುತ್ ವ್ಯತ್ಯಯದಿಂದಾಗಿ ಬೆಳೆ ಒಣಗಿ ನಷ್ಟ ಅನುಭವಿಸುತ್ತಿರುವ ಈ ಭಾಗದ ರೈತರಿಗೆ ವಿದ್ಯುತ್ ಮೂಲಸೌಕರ್ಯಗಳನ್ನು (ಕಂಬ, ತಂತಿ, ಟ್ರಾನ್ಸ್‌ಫಾರ್ಮರ್) ತುರ್ತಾಗಿ ದುರಸ್ತಿಗೊಳಿಸಲು ಕೈಗೊಂಡಿರುವ ಕಾಲಬದ್ಧ ಯೋಜನೆ ಹಾಗೂ ಬಿಡುಗಡೆ ಮಾಡಲಾದ ಅನುದಾನವೆಷ್ಟು?</td>
<td>ಔರಾದ ಉಪ ವಿಭಾಗದಲ್ಲಿ ಅಕ್ಟೋಬರ್-25 ರಿಂದ ಡಿಸೆಂಬರ್-25ರ ಅವಧಿಯೊಳಗೆ ಪ್ರವಾಹದಿಂದ ನದಿ ಪಾತ್ರದಲ್ಲಿನ ಗ್ರಾಮಗಳಲ್ಲಿ ಹಾನಿಗೊಳಗಾದ ವಿದ್ಯುತ್ ಮೂಲಸೌಕರ್ಯಗಳನ್ನು (ಕಂಬ, ತಂತಿ, ಟ್ರಾನ್ಸ್‌ಫಾರ್ಮರ್) ದುರಸ್ತಿಗೊಳಿಸಲು 2025-26ನೇ ಸಾಲಿನಲ್ಲಿ ಗು.ವಿ.ಸ.ಕಂಪನಿಯ ಬಂಡವಾಳ ವೆಚ್ಚದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.
<table>
<tr><th>ಕ್ರ ಸಂ</th><th>ಕಾಮಗಾರಿಗಳ ಹೆಸರು</th><th>ಸಂಖ್ಯೆ</th><th>ವೆಚ್ಚ, ರೂ ಲಕ್ಷಗಳಲ್ಲಿ</th></tr>
<tr><td>1</td><td>ಕಂಬ ಹಾಗೂ ತಂತಿ ಬದಲಾವಣೆ</td><td>163</td><td>27.71</td></tr>
<tr><td>2</td><td>ಪರಿವರ್ತಕ ಬದಲಾವಣೆ</td><td>36</td><td>6.7</td></tr>
</table>
ಮುಂದುವರೆದು ಮೇಲೆ ತಿಳಿಸಿರುವ ಎಲ್ಲಾ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿದ್ದು, ಪ್ರಸ್ತುತ ದಿನಾಂಕದವರೆಗೆ ವಿದ್ಯುತ್ ಕಂಬ, ತಂತಿ ಮತ್ತು ಪರಿವರ್ತಕ ಬದಲಾವಣೆ ಕಾಮಗಾರಿಗಳು ಬಾಕಿ ಇರುವುದಿಲ್ಲ.</td>
</tr>
</table>

ಸಂಖ್ಯೆ: ಎನರ್ಜಿ 207 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಮತ್ತು ಪ್ರವಾಸೋದ್ಯಮ ಸಚಿವರು